**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರು.</u>**

ಸಿ.ಸಿ ಸಂಖ್ಯೆಃ 765/2023

ಪಿಡಬ್ಲ್ಯೂಃ 01 ಸಿಡಬ್ಲ್ಯೂ ಃ 01
ದಿನಾಂಕಃ 23-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ಚನ್ನವ್ವ ಕೆಂಗಾಪುರ |
| ಗಂಡನ ಹೆಸರು | - | ಯಲ್ಲಪ್ಪ ಕೆಂಗಾಪುರ |
| ವಯಸ್ಸು | - | 48 ವರ್ಷ |
| ಉದ್ಯೋಗ | - | ಕೂಲಿ ಕೆಲಸ |
| ವಾಸ ಸ್ಥಳ | - | ಶಿಗ್ಗಾಂವ |

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.</u>**

ಮೃತ ದುರ್ಗವ್ವ ಮಣ್ಣವಡ್ಡರ ರವರ ಪರಿಚಯ ನನಗೆ ಇತ್ತು. ಅವರು ತೀರಿಕೊಂಡಿದ್ದಾರೆ. ಚಾಸಾ- 7 ರಿಂದ 9 ರವರ ಪರಿಚಯ ನನಗೆ ಇದೆ. ಆರೋಪಿಯ ಪರಿಚಯ ನನಗೆ ಇದೆ.

ಸುಮಾರು ಎರಡುವರೆ ವರ್ಷದ ಹಿಂದೆ ಬೆಳಿಗ್ಗೆ 4 ರಿಂದ 4-30 ರ ಒಳಗೆ ನಾನು, ಮೃತ ದುರ್ಗವ್ವ ಮತ್ತು ಚಾಸಾ- 7 ರಿಂದ 9 ರವರು ಸವಣೂರಿಗೆ ಆರೋಪಿಯ ಆಟೋದಲ್ಲಿ ಬರುತ್ತಿದ್ದೇವು. ನಾನು ಮತ್ತು ಚಾಸಾ- 7 ರಿಂದ 9 ರವರು ಹಿಂದೆ ಕುಳಿತಿದ್ದೇವು. ಮೃತ ದುರ್ಗವ್ವಳು ಆರೋಪಿ/ ಚಾಲಕನ ಪಕ್ಕ ಮುಂದೆ ಕುಳಿತಿದ್ದಳು. ಗುಂಡುರ ಬಳಿ ಸೇತುವೆ ಕಟ್ಟುತ್ತಿದ್ದು ಅಲ್ಲಿ ಮಣ್ಣಿನ ರಾಶಿ ಇದ್ದು ಅಲ್ಲಿಗೆ ಆರೋಪಿಯ ಅತೀ ಜೋರಾಗಿ ಆಟೋವನ್ನು ಗುದ್ದಿದ್ದನು. ಆಗ ಎಲ್ಲರೂ ಸಹ ಬಿದ್ದೇವು. ನಂತರ ದುರ್ಗವ್ವಳಿಗೆ ಪ್ರಜ್ಞೆ ಬಂದಿರುವುದಿಲ್ಲ. ನಂತರ ಅದೇ ಆಟೋನಲ್ಲಿ ದುರ್ಗವಳ್ಳನ್ನು ಕರೆದುಕೊಂಡು ಶಿಗ್ಗಾಂವ ಸರ್ಕಾರಿ ಆಸ್ಪತ್ರೆಗೆ ಹೋದೆವು.

ನನಗೆ ಬೆನ್ನಿನ ಹಿಂದೆ ಪೆಟ್ಟೊಗಿತ್ತು ಇನ್ನೂ ಉಳಿದವರಿಗೆ ಕೈ ಕಾಲುಗಳು ಪೆಟ್ಟಾಗಿದ್ದವು. ಮೃತ ದುರ್ಗವ ಅವರಿಗೆ ಕಾಲಿಗೆ ಮತ್ತು ಎದೆಗೆ ಪೆಟ್ಟಾಗಿತ್ತು ಅವರು ತೀರಿಕೊಂಡಿರುತ್ತಾರೆ ಆಸ್ಪತ್ರೆಯಲ್ಲಿ ತಿಳಿಸಿರುತ್ತಾರೆ.

ನಾನು ಈ ಕುರಿತು ಪೋಲಿಸ ಠಾಣೆಯಲ್ಲಿ ಪಿರ್ಯಾಧಿಯನ್ನು ನಿಡೀರುತ್ತೇನೆ. ಅದೇ ದಿನ ಮದ್ಯಾಹ್ನ 3.30 ಗಂಟೆ ಸುಮಾರಿಗೆ ಅಪಘಾತವಾದ ಸ್ಥಳವನ್ನು ಪೋಲಿಸರಿಗೆ ತೋರಿಸಿರುತ್ತೇನೆ.

ಆ ಸಮಯದಲ್ಲಿ ಚಾಸಾ- 5 ಮತ್ತು 6 ರವರು ಹಾಜರಿದ್ದರು. ಸದರಿ ಅಪಘಾತವು ಆರೋಪಿ ಆಟೋವನ್ನು ಜೋರಾಗಿ ಓಡಿಸಿದ್ದರಿಂದ ಆಗಿರುತ್ತದೆ.

ಸಾಕ್ಷಿಗೆ ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 3 ಎಂದು ಸಾಕ್ಷಿಯ ಸಹಿಯನ್ನು 3(ಎ) ಎಂದು ಗುರುತಿಸಲಾಯಿತು. ಆ ವೇಳೆಯಲ್ಲಿ ತೆಗೆದ ಭಾವ ಚಿತ್ರಗಳಲ್ಲಿ ತಾನು ಇರುವುದನ್ನು ನಿಖರಪಡಿಸಿಕೊಂಡು ಅವುಗಳನ್ನು ಕ್ರಮವಾಗಿ ನಿಪಿ- 4 ಮತ್ತು 5 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯ ಪೂರ್ಣ ಹೆಸರು ತ್ರೀಲೋಚನಯ್ಯ ತಂದೆ ಚಂದ್ರಶೇಖರಯ್ಯ ಹೊಂಬಾಳಿಮಠ ಇರುತ್ತದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ.</u>

ದಿಃ 08-06-2023 ರಂದು ಈ ಅಪಘಾತ ಆಗಿರುತ್ತದೆ ಎಂದರೆ ಸರಿ. ಆರೋಪಿಯ ಆಟೋ ಸಂಖ್ಯೆ ಕೆಎ- 27 ಬಿ -6926 ಇರುತ್ತದೆ ಎಂದರೆ ಸರಿ. ಗುಂಡೂರ ಸೇತುವೆ ಬಳಿ ಆರೋಪಿಯು ಜೋರಾಗಿ ಬಂದು ಬ್ರೇಕ ಹಾಕಿರುತ್ತಾರೆ ಎಂದರೆ ಸರಿ. ಆಗ ಆಟೋವನ್ನು ನಿಯಂತ್ರಿಸಲು ಆಗದೇ ಪಲ್ಟಿ ಆಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ ಎನ್ ಕೆ ವಕೀಲರಿಂದಃ</u>

ಪಿರ್ಯಾಧಿಯನ್ನು ಬರೆಯಲು ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ನಾನು ಹೇಳಿದ ಹಾಗೆ ಪೋಲಿಸರು ಬರೆದಿರುತ್ತಾರೆ. ಅಪಘಾತವಾದ ದಿನಾಂಕ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ಜಾಗದಲ್ಲಿ ಆಯಿತು ಎಂದರೆ ಗುಂಡೂರು ಸೇತುವೆ ಬಳಿ ಆಗಿರುತ್ತದೆ. ಅಪಘಾತವಾದ ದಿನ ನೀವು ಶಿಗ್ಗಾಂವವನ್ನು ಎಷ್ಟು ಗಂಟೆಗೆ ಬಿಟ್ಟರಿ ಎಂದರೆ ಬೆಳಿಗೆ 4 ರಿಂದ 4.30 ರ ಒಳಗೆ. ಶಿಗ್ಗಾಂವ ಇಂದ ಅಪಘಾತವಾದ ಸ್ಥಳಕ್ಕೆ ಅಂದಾಜು 5-6 ಕಿ ಮೀ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನೀವು ಆಟೋರಿಕ್ಷಾದ ಹಿಂದುಗಡೆ ಕುಳಿತಿದ್ದೀರಿ ಎಂದರೆ ಸರಿ. ನೀವು ಹಿಂದೆ ಕುಳಿತಿದ್ದರಿಂದ ಆಟೋವಿನ ಮುಂದೆ ಬರುವ ವಾಹನಗಳು ನಿಮಗೆ ಕಾಣುತ್ತಿರಲಿಲ್ಲ ಎಂದರೆ ಸರಿ. ಆಗ ಕತ್ತಲೆ ಇತ್ತು. ಆಟೋರೀಕ್ಷಾದ ಎರಡು ಬದಿಗಳು ಮುಚ್ಚಿಕೊಂಡಿದ್ದವು ಎಂದರೆ ಸರಿ. ಶಿಗ್ಗಾಂವ ಇಂದ ಆಟೋರಿಕ್ಷಾವು ನಿಧಾನವಾಗಿ ಬರುತ್ತಿತ್ತು ಎಂದರೆ ಜೋರಾಗಿ ಬರುತ್ತಿತ್ತು. ಅಪಘಾತ ಸ್ಥಳಕ್ಕೆ ಬಂದಾಗ ಸಮಯ ಎಷ್ಟಾಗಿತ್ತು ಎಂದರೆ 4.30 ಆಗಿತ್ತು. ಆಟೋರಿಕ್ಷಾ ಎಷ್ಟು ವೇಗವಾಗಿ

ಬರುತ್ತಿತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಆದರೆ ಮಣ್ಣಿನ ರಾಶಿ ಇದುದ್ದರಿಂದ ಅಲ್ಲಿಗೆ ಬಂದು ಪಲ್ಟಿ ಆಗಿರುತ್ತದೆ. ಸದರಿ ವಿಷಯವನ್ನು ನಿಮ್ಮ ಪಿರ್ಯಾಧಿಯಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ. ವಾಹನವು ಜೋರಾಗಿ ಹೋಗುತ್ತಿತ್ತು ಎಂದು ನುಡಿದಿದ್ದು, ನಿಮಗೆನಾದರೂ ವಾಹನ ಓಡಿಸಿ ರೂಡಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಅಪಘಾತ ಸ್ಥಳದಲ್ಲಿ ಸೇತುವೆ ಕಾಮಗಾರಿ ನಡೆದಿತ್ತು ಎಂದರೆ ಸರಿ. ಆ ಕಾರಣ ರಸ್ತೆ ಸರಿಯಾಗಿ ಇರಲಿಲ್ಲ ಎಂದರೆ ಸರಿ. ಡಾಂಬರ ರಸ್ತೆಗೂ ಮತ್ತು ಕಚ್ಚಾ ರಸ್ತೆಗೂ 2 ಪೂಟ ತಗ್ಗು ಇದೆ ಎಂದರೆ ಸರಿ. ಅಲ್ಲಿ ಯಾವುದೇ ವಾಹನ ನಿಧಾನವಾಗಿ ಹೋದರು ಪಲ್ಟಿ ಆಗುತ್ತದೆ ಎಂದರೆ ಸರಿ. ಆದಿನ ಆರೋಪಿಯು ನಿಧಾನವಾಗಿ ಬಂದರು ಸಹ, ತಗ್ಗು ಇದುದ್ದರಿಂದ ಆಟೋ ಪಲ್ಟಿ ಆಗಿರುತ್ತದೆ ಎಂದರೆ ಜೋರಾಗಿ ಬಂದಿದ್ದರಿಂದಲೇ ಆಗಿರುತ್ತದೆ. ಶಿಗ್ಗಾಂವ ಇಂದ ಸವಣೂರಿಗೆ ಬರುವಾಗ ಗುಂಡೂರ ಸೇತುವೆಬಳಿ ಸ್ವಲ್ಪ ಹಿಂದೆ ಒಂದು ತಿರುವು ಇದೆ ಎಂದರೆ ಸರಿ. ಸೇತುವೆ ಕಾಮಗಾರಿ ಬಗ್ಗೆ ಏನಾದರೂ ಸೂಚನಾ ಫಲಕ ಹಾಕಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ರಸ್ತೆ ಕಾಮಗಾರಿ ಇದ್ದರೆ ಸೂಚನಾ ಫಲಕ ಹಾಕಿರುತ್ತಾರೆ ಎಂದರ ಸರಿ. ಯಾವ ದಿಕ್ಕಿಗೆ ಹೋಗಬೇಕು ಎಂಬ ಯಾವುದೇ ಮಾರ್ಗದರ್ಶನದ ಫಲಕಗಳು ಹಾಕಿರಲಿಲ್ಲಎಂದರೆ ಸರಿ. ಈ ಅಪಘಾತವು ಸೇತುವೆಯ ಗುತ್ತಿಗೆದಾರರ ನಿರ್ಲಕ್ಷತನದಿಂದ ಮತ್ತು ಯಾವುದೇ ನಾಮ ಫಲಕ ಹಾಕದೇ ಇದುದ್ದರಿಂದ ಆಗಿರುತ್ತದೆ ಎಂದರೆ ಸರಿ.

ಪರಿಹಾರ ಕೇಳಿ ಶಿಗ್ಗಾಂವ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿ. ಅವುಗಳ ಸಂಖ್ಯೆ ಎಂ ವಿ ಸಿ 316, 318/2024 ಎಂದರೆ ಸರಿ. ಅವು ಚಾಲ್ತಿಯಲ್ಲಿ ಇವೆ ಎಂದರೆ ಸರಿ. ನೀವು ಪರಿಹಾರ ಪಡೆಯುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ಪಿರ್ಯಾಧಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯು ನಿಧಾನವಾಗಿ ವಾಹನ ಚಲಾಯಿಸುತ್ತಿದ್ದರು ಸಹ ರಸ್ತೆ ತಗ್ಗು ಇದುದ್ದರಿಂದ ಮತ್ತು ಕಾಮಗಾರಿ ಇದುದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.